ಕರ್ನಾಟಕ ವಿಧಾನ ಸಭೆ

# ಕರ್ನಾಟಕ ವಿಧಾನ ಮಂಡಲದ ಸದಸ್ಯರುಗಳಿಗಿರುವ ಸೌಲಭ್ಯಗಳು



**ಲೆಕ್ಕಪತ್ರಗಳ ಶಾಖೆ-1**

**ಕರ್ನಾಟಕ ವಿಧಾನ ಸಭೆ ಸಚಿವಾಲಯ,**
**ವಿಧಾನಸೌಧ, ಬೆಂಗಳೂರು-560 233**

# ಕರ್ನಾಟಕ ವಿಧಾನಸಭೆ

# ಕರ್ನಾಟಕ ವಿಧಾನ ಮಂಡಲದ ಸದಸ್ಯರುಗಳಿಗಿರುವ ಸೌಲಭ್ಯಗಳು

## (ದಿನಾಂಕ 03.10.2023ರಲ್ಲಿದ್ದಂತೆ)

ಲೆಕ್ಕಪತ್ರ ಶಾಖೆ – 1
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ,
ಬೆಂಗಳೂರು–560 233.

# ಸದಸ್ಯರ ಸಂಬಳ ಮತ್ತು ಭತ್ಯೆಗಳು

| | |
|---|---|
| ಸಂಬಳ | ರೂ. 40,000/- |
| **ಇತರೆ ಭತ್ಯೆಗಳು** | |
| ದೂರವಾಣಿ ವೆಚ್ಚ | ರೂ. 20,000/- |
| ಕ್ಷೇತ್ರ ಭತ್ಯೆ | ರೂ. 60,000/- |
| ಅಂಚೆ ವೆಚ್ಚ | ರೂ. 5,000/- |
| ಆಪ್ತ ಸಹಾಯಕ ಹಾಗೂ ರೂಮ್ ಬಾಯ್ ಸಂಬಳ | ರೂ. 20,000/- |
| **ತಿಂಗಳಿಗೆ ಒಟ್ಟು** | **ರೂ. 1,45,000/-** |
| ಚುನಾವಣಾ ಕ್ಷೇತ್ರ ಪ್ರಯಾಣ ಭತ್ಯೆ- ತಿಂಗಳಿಗೆ | **ರೂ. 60,000/-** |
| ಸಭೆಗಳಿಗೆ ಹಾಜರಾಗುವುದಕ್ಕಾಗಿ ದಿನ ಭತ್ಯೆ | ಅ) ರಾಜ್ಯದೊಳಗೆ ದಿನಕ್ಕೆ **ರೂ.2,500/-**<br>ಆ) ರಾಜ್ಯದ ಹೊರಗೆ ದಿನಕ್ಕೆ **ರೂ.3,500/-**<br>ಇ) ನಿಗದಿತ ದರಗಳಲ್ಲಿ ಊಟ ಮತ್ತು ವಸತಿ ಒದಗಿಸುವ ಹೋಟೆಲ್ ಮತ್ತು ಇತರೆ ನೋಂದಾಯಿತ ವ್ಯಾಪಾರ ಸಂಸ್ಥೆಗಳಲ್ಲಿ |

| | |
|---|---|
| | ಉಳಿದುಕೊಳ್ಳಲು ಬಿಲ್ಲುಗಳನ್ನು ಹಾಜರುಪಡಿಸುವ ಷರತ್ತಿಗೆ ಒಳಪಟ್ಟು ಪ್ರತಿದಿನಕ್ಕೆ **ರೂ. 7000/-** ಗಳನ್ನು ಹಾಗೂ ಸ್ಥಳೀಯ ಸಾರಿಗೆಗಾಗಿ **ರೂ. 2000/-**ಗಳನ್ನು ನೀಡಲಾಗುತ್ತದೆ. |

**ಪ್ರಯಾಣ ಭತ್ಯೆ:**

ಪ್ರಯಾಣದ ಬಗೆಯನ್ನು ಗಣನೆಗೆ ತೆಗೆದುಕೊಳ್ಳದೆ ಪ್ರತಿ ಕಿಲೋ ಮೀಟರ್‌ಗೆ ರೂ.35/- ಗಳು ಅಥವಾ ರೂ.1,500/-ಗಳ ನಿಗದಿತ ಪ್ರಯಾಣ ಭತ್ಯೆ (ಕಿಲೋ ಮೀಟರ್‌ಗಳಲ್ಲಿ ಪ್ರಯಾಣಿಸಿದ ಅಂತರದ ಆಧಾರದ ಮೇಲೆ ಪ್ರಯಾಣ ಭತ್ಯೆಯನ್ನು ಲೆಕ್ಕ ಹಾಕುವುದಕ್ಕೆ ಬದಲಾಗಿ ಪ್ರತಿ ಸಭೆಯ ಹಾಜರಾತಿಗೆ)

**ವಿಮಾನ ಮತ್ತು ರೈಲ್ವೆ ಪ್ರಯಾಣ ಭತ್ಯೆ:**

ಪ್ರತಿ ಆರ್ಥಿಕ ವರ್ಷದಲ್ಲಿ, ಸದಸ್ಯರು ಭಾರತದಲ್ಲಿ ವಿಮಾನದ ಮೂಲಕ ಅಥವಾ ರೈಲ್ವೆ ಮೂಲಕ ಒಂದು ಅಥವಾ ಒಂದಕ್ಕಿಂತ ಹೆಚ್ಚು ಪ್ರಯಾಣಗಳಲ್ಲಿ ಒಬ್ಬರೇ ಅಥವಾ ಸಹಚರರೊಂದಿಗೆ ಪ್ರಯಾಣಿಸುವ ಉದ್ದೇಶಕ್ಕಾಗಿ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳಲ್ಲಿ ರೂ.2,50,000/- (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಮೊತ್ತವನ್ನು ಎರಡು ಸಮಾನ ಕಂತುಗಳಲ್ಲಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

**ಮೋಟಾರ್ ಕಾರು/ಮೋಟಾರ್ ಸೈಕಲ್ ಖರೀದಿಗೆ ಮುಂಗಡಗಳು:**

ಸದಸ್ಯರು ತಮ್ಮ ಅಧಿಕಾರಾವಧಿಯಲ್ಲಿ ಮೋಟಾರ್ ಕಾರು ಖರೀದಿಗಾಗಿ ಶೇ.3%ರ ಸರಳ ಬಡ್ಡಿ ದರದಲ್ಲಿ ರೂ.30,00,000/-ಗಳ ಮುಂಗಡ ಮೊತ್ತವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

ಸದಸ್ಯರು ತಮ್ಮ ಅಧಿಕಾರಾವಧಿಯಲ್ಲಿ ಮೋಟಾರ್ ಸೈಕಲ್ ಖರೀದಿಸುವುದಕ್ಕಾಗಿ ರೂ.8,000/- ಮುಂಗಡವನ್ನು ಪಡೆದುಕೊಳ್ಳಲು ಸಹ ಹಕ್ಕುಳ್ಳವರಾಗಿರುತ್ತಾರೆ.

ಮುಂಗಡ ಹಣದ ಬಾಕಿಗಳು ವಸೂಲಿಯಾಗುವುದಕ್ಕಿಂತ ಮುಂಚೆ ಸದಸ್ಯನು ಮರಣ ಹೊಂದಿದಲ್ಲಿ, (ಅಸಲು ಹಾಗೂ ಅದರ ಮೇಲಿನ ಬಡ್ಡಿ ಎರಡೂ ಸೇರಿದಂತೆ) ಬಾಕಿಯಿರುವ ಸಂಪೂರ್ಣ ಮೊತ್ತವನ್ನು ಮನ್ನಾ ಮಾಡಲಾಗುವುದು.

**ವೈದ್ಯಕೀಯ ಸೌಲಭ್ಯಗಳು:**

ರಾಜ್ಯ ಸರ್ಕಾರವು ನಿರ್ವಹಿಸುತ್ತಿರುವ ಯಾವುದೇ ಆಸ್ಪತ್ರೆ ಅಥವಾ ಚಿಕಿತ್ಸಾಲಯ ಅಥವಾ ಕರ್ನಾಟಕ ವಿಧಾನಮಂಡಲವು ಅಧಿಸೂಚಿಸಿದ ಯಾವುದೇ ಆಸ್ಪತ್ರೆ ಅಥವಾ ಚಿಕಿತ್ಸಾಲಯದಲ್ಲಿ ತಾನು ಮತ್ತು ತನ್ನ ಕುಟುಂಬದ ಸದಸ್ಯರು ಪಡೆದ ವೈದ್ಯೋಪಚಾರ ಮತ್ತು ಚಿಕಿತ್ಸೆಗಾಗಿ ವೆಚ್ಚಗಳನ್ನು ಮಾಡುವಂಥ ಯಾರೇ ಸದಸ್ಯರು ಚಿಕಿತ್ಸೆಗಾಗಿ ಮಾಡಿದ ವೆಚ್ಚಗಳ ಮರುಪಾವತಿಗೆ ಹಕ್ಕುಳ್ಳವರಾಗಿರುತ್ತಾರೆ. ಮರುಪಾವತಿಸುವ ವೆಚ್ಚಗಳ ಪೈಕಿ ಚಿಕಿತ್ಸೆಯನ್ನು ಪಡೆದುಕೊಂಡ ಸ್ಥಳದಲ್ಲಿ ವಸತಿಗಾಗಿ ಮಾಡಿದ ಖರ್ಚು-ವೆಚ್ಚಗಳೂ ಸಹ ಒಳಗೊಂಡಿರುತ್ತವೆ.

ಯಾರೇ ಸದಸ್ಯರು, ರಾಜ್ಯ ಸರ್ಕಾರವು ನಿರ್ವಹಿಸುತ್ತಿರುವ ಆಸ್ಪತ್ರೆ ಅಥವಾ ಚಿಕಿತ್ಸಾಲಯವಾಗಿರದ ಮತ್ತು ಕರ್ನಾಟಕ ವಿಧಾನಮಂಡಲವು ಅಧಿಸೂಚಿಸಿದ ಆಸ್ಪತ್ರೆ ಅಥವಾ ಚಿಕಿತ್ಸಾಲಯವಾಗಿರದ ಬೇರೆ ಯಾವುದೇ ಸ್ಥಳದಲ್ಲಿ ತಾನು ಪಡೆದ ವೈದ್ಯೋಪಚಾರ ಹಾಗೂ ಚಿಕಿತ್ಸೆಗಾಗಿ ವೈದ್ಯಕೀಯ ವೆಚ್ಚಗಳನ್ನು ಭರಿಸಿದ ಸಂದರ್ಭದಲ್ಲಿ, ಅವರು ಸರ್ಕಾರಿ ಆಸ್ಪತ್ರೆ ಅಥವಾ

ಚಿಕಿತ್ಸಾಲಯದಲ್ಲಿ ಪಡೆದ ವೈದ್ಯೋಪಚಾರ ಅಥವಾ ಚಿಕಿತ್ಸೆ ವೆಚ್ಚಗಳ ಸಮನಾದ ವೆಚ್ಚಕ್ಕೆ ಮರುಪಾವತಿ ಪಡೆಯಲು ಅರ್ಹರಿರುತ್ತಾರೆ.

**ಟಿಪ್ಪಣಿ:**

1. ಯಾರೇ ಸದಸ್ಯರು ತಮ್ಮ ಜೀವಿತಾವಧಿಯಲ್ಲಿ ಒಂದು ಬಾರಿಗೆ ಮಾತ್ರ ಶ್ರವಣ ಸಾಧನಕ್ಕಾಗಿ ಪ್ರತಿ ಕಿವಿಗೆ ರೂ.1,00,000/-ಗಳವರೆಗೆ, ದಂತಪಂಕ್ತಿಗಾಗಿ ರೂ.50,000/-ಗಳವರೆಗೆ ಹಾಗೂ ಕ್ಯಾಪ್‌ನೊಂದಿಗೆ ರೂಟ್‌ಕೆನಾಲ್‌ಗಾಗಿ ರೂ.10,000/-ಗಳವರೆಗೆ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ಹಕ್ಕುಳ್ಳವರಾಗಿರುತ್ತಾರೆ.
2. 'ಕುಟುಂಬದ ಸದಸ್ಯ' ಎಂದರೆ ಗಂಡ ಅಥವಾ ಹೆಂಡತಿ, 25 ವರ್ಷ ವಯೋಮಾನದ ವರೆಗಿನ ಅವಲಂಬಿತ ಅವಿವಾಹಿತ ಮಗ, ಅವಲಂಬಿತ ಅವಿವಾಹಿತ ಮಗಳು, ಅಂಗವಿಕಲ ಮಕ್ಕಳೂ ಸೇರಿದಂತೆ ಮಾನಸಿಕ ಅಸ್ವಸ್ಥ ಮಕ್ಕಳು, ತಂದೆ ಹಾಗೂ ತಾಯಿ ಮತ್ತು ವಿಧಾನಮಂಡಲದ ಮಹಿಳಾ ಸದಸ್ಯರ ಸಂದರ್ಭದಲ್ಲಿ ಅವರ ಅತ್ತೆ/ಮಾವ.

**ಗಣಕ ಯಂತ್ರ ಅನುದಾನ:**

ಕರ್ನಾಟಕ ವಿಧಾನಸಭೆಯ ಪ್ರತಿಯೊಬ್ಬ ಶಾಸಕರಿಗೆ (ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಚಿವರು, ಸಂಸದೀಯ ಪದಾಧಿಕಾರಿಗಳನ್ನು ಒಳಗೊಂಡಂತೆ) ತಮ್ಮ ಸದಸ್ಯತ್ವದ ಅಧಿಕಾರಾವಧಿಯಲ್ಲಿ ಕಂಪ್ಯೂಟರ್/ ಐ-ಪ್ಯಾಡ್/ಟ್ಯಾಬ್ಲೆಟ್‌ಗಳನ್ನು ಖರೀದಿಸಲು ರೂ.50,000/- ಗಳನ್ನು ಗಣಕ ಯಂತ್ರ ಅನುದಾನ ಎಂದು ಮಂಜೂರು ಮಾಡಬಹುದು.

**ಇತರೆ ಸೌಲಭ್ಯಗಳು:**

1. ಸದಸ್ಯರು ಕೋರಿಕೆಯ ಮೇರೆಗೆ ಮಿಲಿಟರಿ ಅಥವಾ ರಕ್ಷಣಾ ಇಲಾಖೆಯಿಂದ ತಿರಸ್ಕೃತಗೊಂಡ ಮಿಲಿಟರಿ ಜೀಪುಗಳು/ ಮೋಟಾರ್ ಸೈಕಲ್‌ಗಳನ್ನು ಖರೀದಿಸಬಹುದು.
2. ಸದಸ್ಯರಿಗೆ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್ ರವರು ಹಂಚಿಕೆ ಮಾಡುವ ಎಲ್.ಪಿ.ಜಿ ಸಂಪರ್ಕವನ್ನು 'ಪ್ರಥಮ ಆದ್ಯತೆ' ಮೇರೆಗೆ ಕಲ್ಪಿಸಲಾಗುತ್ತದೆ.

* * * * *

KARNATAKA LEGISLATIVE ASSEMBLY

# FACILITIES TO THE MEMBERS OF KARNATAKA LEGISLATURE

## (AS ON 03.10.2023)



**ACCOUNTS -I BRANCH**

Karnataka Legislative Assembly Secretariat

# KARNATAKA LEGISLATIVE ASSEMBLY

# FACILITIES TO THE MEMBERS
# OF
# KARNATAKA LEGISLATURE
# (As On 03.10.2023)

**Accounts- I Branch,**
**Karnataka Legislative Assembly Secretariat,**
**Vidhana Soudha, Bengaluru-560 233.**

## SALARY AND ALLOWANCES OF MEMBERS

| | |
|---|---|
| Salary | -Rs. 40,000/- |
| **Other Allowances** | |
| Telephone Charges | -Rs. 20,000/- |
| Constituency Allowances | -Rs. 60,000/- |
| Postal Charges | -Rs. 5,000/- |
| Salary of Personal Assistant and Room Boy | -Rs.20,000/- |
| **Total** | **-Rs. 1,45,000/- per month** |
| Constituency Travelling Allowances | -Rs. 60,000/- per month |
| Daily Allowance for attending meetings | a) Rs. 2,500/- per day within the State<br>b) Rs. 3,500/- per day outside the State<br>c) Rs.7,000/- per diem for stay in hotel or other Registered Establishments providing boarding and lodging at |

scheduled tariffs subject to production of bills and also Rs.2000/- towards Local Transport.

**TRAVELLING ALLOWANCE:**

Rs. 35/- per kilometer irrespective of the mode of journey or fixed travelling allowance of Rs.1,500/- for attending each meeting in lieu of travelling allowance calculated on the basis of distance travelled in Kilometers.

**TRANSIT BY AIR AND RAILWAY ALLOWANCE:**

In every financial year, Members are entitled to receive a sum of Rs.2,50,000/- (Two Lakh Fifty thousand only) in two equal installments, payable in the months of April and October for the purpose of travelling either single or with a companion in one or more journeys by air or by railway in India.

**MOTOR CAR / MOTOR CYCLE ADVANCES:**

Members are entitled to an advance of Rs.30,00,000/- for purchase of a motor car on simple interest at 3% p.a during their tenure.

They are also entitled to an advance of Rs.8,000/- for purchasing a Motor Cycle during their tenure.

In the event of death of a Member before recovery of dues towards the advance, the entire amount outstanding (both principal and interest) there on shall be waived.

## MEDICAL FACILITIES:

A Member who incurs expenses for the medical attendance and treatment obtained by him and members of his family in any Hospital or Dispensary maintained by the State Government or in any Hospital or Dispensary notified by the Karnataka Legislature, he shall be entitled for reimbursement of the expenses incurred thereon. The expenses shall be inclusive of the charges for accommodation in the place where such treatment is taken.

In respect of expenses incurred by a Member for the Medical Attendance and treatment obtained by him in any place other than in a Hospital or Dispensary maintained by the State Government and other than in a Hospital or Dispensary notified by the Karnataka Legislature, he shall be entitled for reimbursement of the expenses incurred to the

same extent as in Government Hospital or Dispensary.

**Note:**

1. A Member shall be entitled for reimbursement upto Rs.1,00,000/- per ear once in his/her life time for hearing-aid, upto Rs.50,000/- for denture and upto Rs.10,000/- for root canal with cap.
2. 'Member of Family' means the husband or wife, dependant unmarried son upto 25 years of age, dependant unmarried daughter, mentally retarded including handicapped children, father and mother and 'mother-in-law/father-in-law in case of female member of Legislature'.

**COMPUTER GRANT:**

Rs.50,000/- may be sanctioned as a computer grant to each Member of Karnataka Legislative Assembly (including Hon'ble Chief Minister, Hon'ble Ministers, Parliamentary Functionaries) for their tenure of membership to purchase computer/I- pad/Tablet.

**OTHER FACILITIES:**

1. Members can purchase discarded Military Jeeps/Motor Cycles from the Military or Defense on request.
2. Members are provided with a LPG connection on 'Top Priority basis' allotted by the Hindustan Petroleum Corporation.

* * * * *